ಮೈಸೂರ ಗೆಜಿಟ್.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ ಏಪ್ರೆಲ್ ತಾ|| 12, ಸ್ಯ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 27ನೇ ಮಾರ್ಚಿ 1890.

ಇದರಿಂದ ಪ್ರಕಟನೆಲ್ಪಡುವದೇನಂದರೆ, ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿ ಆದ ಬಾಬತು ಇದರ ಅಡಿ ಕಂಡ ಚಕ್ಕುಬೀನೆಗಳು ಕೆಳಗೆ ಕಾಣಿಸಿರುವ ತಾರೀಖು ವ ಸ್ಥಳಗಳಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆ.

ಹರಾಜು ನಡಿಯತಕ್ಕ ಸ್ಥಳದ ಹೆಸರು.	ಹರಾಜು ತಾರೀಖು.	ಸಾಗವಾನಿ ನಾಟುಗಳು.	ಕಾಡುಜಾತಿ ನಾಟುಗಳು.	ಸಾಗವಾನಿ ಮತ್ತು ಕಾಡು ಜಾತಿಮರಗಳು	ಸಾಗವಾನಿ ತುಂಡುಗಳು.	ಪರಾ.
ಚಿಕ್ಕೇನಹಳ್ಳಿ ಮತ್ತು ಕುಂಚೆನಹಳ್ಳಿ	10ನೇ ಏಪ್ರೆಲ್	..	..	..	5000	ಖರೀದಿದಾರುಗಳು ಅಸಾಮಿಗಳ ಉಸ್ತುವಾರಿ ನೋಡಿಕೊಳ್ಳತಕ್ಕದ್ದು.
...ೀರನಯಡೆಹಳ್ಳಿ ..	12ನೇ ಡಿಟೋ	..	..	..	2000	
...ಪುರ ..	15ನೇ ಡಿಟೋ	..	..	100	..	
...ಕೊಪ್ಪ ..	17ನೇ ಡಿಟೋ	..	20	100	..	
...ರಿ ..	22ನೇ ಡಿಟೋ	50	24	100	..	
...ಣಿ ..	24ನೇ ಡಿಟೋ	..	..	400	..	

ಹರಾಜಿನ ಪ್ರಕಾರ್ತುಗಳು—ಡಿಪೋ ನಾಟುಗಳು ಮತ್ತು ಮರಗಳ ವಿಷಯದಲ್ಲಿ 1887ನೇ ಇಸವಿ ಆಗ್ಸ್ಟ್ 30ನೇ ತಾರೀಖಿನ 99ನೇ ನಂ. ನೋಟಿಫಿಕೇರ್ಷ ನೋಡತಕ್ಕದ್ದು. ಫಾರೆಸ್ಟ್‌ನಲ್ಲಿರುವ ಕಾರಣಿಂಗ್ ತುಂಡುಗಳ ವಿಷಯದಲ್ಲಿ ಮೊಬಲಗನ್ನು ನಗದಾಗಿ ಹರಾಜು ತಾರೀಖು ಲಾಗಾಯತು 3 ದಿವಸಗಳಲ್ಲಿ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದರೆ ಆವಲ್ ಖರೀದಿದಾರ್ರ ಆವಗೂಣಕ್ಕೆ ಸಾಮಾನು ಪುನ ಶ್ಚ ಹರಾಜು ಮಾಡಲ್ಪಡುವದು. ಪೂರಾ ಸಾಮಾನನ್ನು ಹರಾಜು ತಾರೀಖು 10 ದಿನಗಳಲ್ಲಿ ಸಾಗಿಸಿಕೊಂಡು ಹೋಗಬೇಕು.

ನೋಟಿಫಿಕೇಷ್ಯ.

ತಾರೀಖು 1ನೇ ಏಪ್ರಿಲ್ 1890.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಡಿಸ್ಟ್ರಿಕ್ಟ್ ಉತ್ಪತ್ತಿಯಾದ ಚಂದನಬೀನೆ ಮತ್ತು ಪಸಾರೆ ಜಿನಸಿಗಳು ಮೈಸೂರ ಉಡಿಯೂರ್ಡಿನಲ್ಲಿ ಬಹಿರಂಗವಾದ ಹರಾಜ್. ಮೂಲಕ ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇಟರು ಮತ್ತು ಡೆಪ್ಯುಟಿ ಕಮ್ಮಿಷನರವರಿಂದ 1890ನೇ ಇಸವಿ ಏಪ್ರಿಲ್ ತಾರೀಖು 25ರಲ್ಲು ವಿಕ್ರಯಿಸಲ್ಪಡುವದು.

ಜಾತಿ.	ಕ್ಲಾಸ್.	ಸಲೆಅಡಿ ಸುಮಾರು.
ತೇಗು ನಾಟಾ ..	1ನೇ ಕ್ಲಾಸ್	491 ಸಲೆ ಅಡಿ
ಡಿಟೋ ..	3ನೇ ಡಿಟೋ	755 ಡಿಟೋ
ಡಿಟೋ ..	4ನೇ ಡಿಟೋ	2667 ಡಿಟೋ
ತೇಗು ಜಂತೆಗಳು ..	2ನೇ ಡಿಟೋ	473 ಡಿಟೋ
ಹೊನ್ನೆ ನಾಟಾಗಳು ..	2ನೇ ಡಿಟೋ	1342 ಡಿಟೋ
ಹೊನ್ನೆ ಜಂತೆಗಳು ..	ಡಿಟೋ	115 ಡಿಟೋ
ಸ್ಪಂಟೆಡ್ ತೇಗುನಾಟಾ ..	ಡಿಟೋ	9858 ಡಿಟೋ
ಅಳಲೆಕಾಯಿ ..	ಡಿಟೋ	408 ಮಣಗಳು
ದಿಂಡಲ್ ಗೋಂದು ..	ಡಿಟೋ	ಡಿಟೋ
ಜೇನುತುಪ್ಪ ..	ಡಿಟೋ	3 ಮಣಗಳು
ಜೇನುಮೇಣ ..	ಡಿಟೋ	6 ಡಿಟೋ

ಷರತ್ತುಗಳು:—ಸ್ಯ 1887ನೇ ಇಸವಿ ಸೆಪ್ಟೆಂಬರ್ 3ನೇ ವುಕ್ಕುಂ 35ನೇ ನಂಬರ್ ಮೈಸೂರ ಗೆಜಟ್ 1ನೇ ಭಾಗದಲ್ಲಿ ಪ್ರಯಿಷ್ ಮಾಡಿರುವ ಅದೇ ಅಸವಿ ಇಗಸ್ಟು 30ನೇ ವುಕ್ಕುಂ 99ನೇ ನಂಬರ್ ಇಸ್ತಿಹಾರ್ ನೋಡತಕ್ಕದ್ದು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.
ನೆಲವಂಗಲ ತಾಲ್ಲೂಕು ಕಚೇರಿಯಿಂದ.
ಇಸ್ತಿಹಾರ್‌ನಾಮೆ.

ಇದರಿಂದ ಸಹಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

1. ನೆಲವಂಗಲ ತಾಲ್ಲೂಕಿನಲ್ಲಿ ಕುರಂಗದ ಕಲ್ಲು ಜವಾಯಿಸತಕ್ಕ ಹಕ್ಕು, 1890ನೇ ಇಸವಿ ಏಪ್ರಿಲ್ 20ರಲ್ಲು ತಾ[illegible] ಕಚೇರಿಯಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಹರಾಜು ದಿನ 11 ಘಂಟೆಗೆ ಆರಂಭಿಸಲ್ಪಡುವದು.

2. ಅಮಲ್‌ದಾರ್ ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಚಡ ಸವಾಲ್ ಆಂಗೀಕರಿಸತಕ್ಕದ್ದು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿರುತ್ತೆ.

4. ಇಜಾರೆ 1891ನೇ ಇಸವಿ ಮಾರ್ಚಿ 31ನೇ ತಾರೀಖು ವರಿವಿಗೆ ಜಾರಿಯಲ್ಲಿ ಯಿರುವದು.

5. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೊ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೊ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೊ ಅವರಿಂದ ಪಡಕೊಂಡಿರುವ ಅಧಿಕಾರ ಪತ್ರಿಕೆ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

6. ಚಡ ಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಹಾಜರ್ ಮಾಡಬೇಕು, ಹರಾಜು ಮಂಜೂರಾದ ಸಂಗತಿ ಅಮಲ್‌ದಾರ್ರಿಂದ ತಿಳಿಸಲ್ಪಟ್ಟ ಲಾಗಾಯತು 7 ದಿವಸಗಳ ವಳಗಾಗಿ ಬಾಕಿ ಮೊಬಲಗನ್ನು ಚಡ ಸವಾಲ್ ಮೊಬಲಿಗಿನ ಮೇಲ ರೂಪಾಯಿ 1ಕ್ಕೆ 1ಆಣೆ ಮೇರಿಗೆ ಲೋಕಲ್‌ಸೆಸ್ ಸಹ ಹಾಜರ್ ಮಾಡಬೇಕು. ಇದಕ್ಕೆ ತಪ್ಪಿದರೆ ಹಾಜರ್ ಮಾಡಿದ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು, ಡಿಪಾಜಿಟ್ ಹಾಜರ್ ಮಾಡದೆ